ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	482 (769)
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ	:	10.03.2020
4. ಉತ್ತರಿಸುವ ಸಚಿವರು	:	ಸಹಕಾರ ಸಚಿವರು

ವಿಷಯ: ಕೃಷಿ ಮಾರಾಟ ಮಂಡಳಿ ಹಗರಣದ ಬಗ್ಗೆ.

ಕ್ರ ಸಂ	ಪ್ರಶ್ನೆ	ಉತ್ತರ
ಅ	ಕೃಷಿ ಮಾರಾಟ ಮಂಡಳಿಯಲ್ಲಿ ರೂ:100 ಕೋಟಿ ಹಣ ಹಗರಣವಾದದ್ದು, ನಿಜವೇ; ನಿಜವಿದ್ದಲ್ಲಿ, ಅದರ ಸಂಪೂರ್ಣ ಮಾಹಿತಿ ನೀಡುವುದು;	ಕೃಷಿ ಮಾರಾಟ ಮಂಡಳಿಯಲ್ಲಿ ಯಾವುದೇ ಹಗರಣ ಆಗಿರುವುದಿಲ್ಲ. ಆದರೆ ಸಿಂಡಿಕೇಟ್ ಬ್ಯಾಂಕ್, ಉತ್ತರಹಳ್ಳಿ ಶಾಖೆ, ಬೆಂಗಳೂರು ಇಲ್ಲಿ ನಿಶ್ಚಿತ ಠೇವಣಿಯ ರೂಪದಲ್ಲಿ ಇಟ್ಟಿದ್ದ ಮಂಡಳಿಯ ಹಣ ದುರುಪಯೋಗವಾಗಿರುತ್ತದೆ. ಮಂಡಳಿಯು ರೂ.100 ಕೋಟಿ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್, ಉತ್ತರಹಳ್ಳಿ ಶಾಖೆ, ಬೆಂಗಳೂರು ಇಲ್ಲಿ ನಿಶ್ಚಿತ ಠೇವಣಿಯಲ್ಲಿ ದಿನಾಂಕ:18–11–2019ರಲ್ಲಿ ತೊಡಗಿಸಲಾಗಿತ್ತು. ಬ್ಯಾಂಕಿನ ಅಧಿಕಾರಿಗಳು ತಲಾ ರೂ.50.00 ಕೋಟಿ ಮೊತ್ತದ ಎರಡು ನಿಶ್ಚಿತ ಠೇವಣಿ ರಸೀತಿಗಳನ್ನು ನೀಡಿರುವುದನ್ನು ಮಂಡಳಿಯ ದಾಖಲೆಗಳಲ್ಲಿ ನಮೂದು ಮಾಡಲಾಗಿದೆ. ದಿನಾಂಕ:21–1–2020ರಂದು ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾದ ಹಣದ ರಸೀದಿಗಳು ನಕಲಿಯಾಗಿದ್ದು, ರೂ.50.00 ಕೋಟಿ ಮಾತ್ರ ನಿಶ್ಚಿತ ಠೇವಣಿಯಲ್ಲಿ ಇದೆ ಎಂದು ಅದರ ಝುರಾಕ್ಸ್ ಪ್ರತಿಯನ್ನು ಹಾಗೂ ರೂ.48.00 ಕೋಟಿ ಮೊತ್ತವು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆಯಾಗಿದೆ ಎಂದು ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಸಹಾಯಕ ವ್ಯವಸ್ಥಾಪಕರು ತಿಳಿಸಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಈ ಕುರಿತಂತೆ ಹೆಚ್ಚಿನ ಮಾಹಿತಿ ಕೋರಿದಾಗ, ಸಿಂಡಿಕೇಟ್ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ಮತ್ತು ಬ್ಯಾಂಕಿನ ಶಾಖೆಯಲ್ಲಿ ಪರಿಶೀಲನೆ ನಡೆಸಿ ನಂತರದಲ್ಲಿ ರೂ.50.00 ಕೋಟಿ ಮಾತ್ರ ನಿಶ್ಚಿತ ಠೇವಣಿಯಲ್ಲಿ ಇರುತ್ತದೆ ಮತ್ತು ಮಂಡಳಿಯ ನಕಲಿ ಪ್ರಾಧೀಕೃತ ಲೆಕ್ಕಾಧಿಕಾರಿ ಸಲ್ಲಿಸಿದ ದಾಖಲೆಗಳ ಮೇರೆಗೆ ಚಾಲ್ತಿ ಖಾತೆ ತೆರೆದು ಸದರಿಯವರ ನಿರ್ದೇಶನದಂತೆ ಸುಮಾರು ರೂ.48.00 ಕೋಟಿ ವರ್ಗಾವಣೆ ಆಗಿದೆ ಎಂಬ ಮಾಹಿತಿ ನೀಡಿರುತ್ತಾರೆ.

...2

		ಈ ಹಿನ್ನೆಲೆಯಲ್ಲಿ, ಬ್ಯಾಂಕಿನ ಶಾಖೆಯಲ್ಲಿ ವಂಚನೆ ನಡೆದಿರುವುದನ್ನು ಗಮನಿಸಿ, ಸಿಂಡಿಕೇಟ್ ಬ್ಯಾಂಕ್, ಉತ್ತರಹಳ್ಳಿ ಶಾಖೆ ಇದರ ವ್ಯವಸ್ಥಾಪಕರು ಹಾಗೂ ಇತರರ ವಿರುದ್ಧ ಕೃಷಿ ಮಾರಾಟ ನಿರ್ದೇಶಕರು ಹಾಗೂ ಕೃಷಿ ಮಾರಾಟ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು, ಕೂಡಲೇ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ಸಂಖ್ಯೆ:10/2020 ದಾಖಲಿಸಿರುತ್ತಾರೆ. ಪ್ರಸ್ತುತ ವಂಚನೆ ಪ್ರಕರಣವು ಕೇಂದ್ರೀಯ ಅಪರಾಧ ಘಟಕಕ್ಕೆ (ಸಿ.ಸಿ.ಬಿ) ವರ್ಗಾವಣೆಯಾಗಿದ್ದು, ತನಿಖೆ ತೀವ್ರ ಪ್ರಗತಿಯಲ್ಲಿದೆ.
ಆ	ಈ ಹಣವನ್ನು ಯಾವ ಕಾರಣಕ್ಕಾಗಿ ಮೀಸಲಿರಿಸಲಾಗಿತ್ತು; ಕೃಷಿ ಮಾರಾಟ ಮಂಡಳಿಯು ಇದನ್ನು ಯಾವುದಕ್ಕೆ ಉಪಯೋಗಿಸಿದೆ; ಅಥವಾ ದುರುಪಯೋಗಪಡಿಸಿಕೊಂಡಿದೆ;	ಆವರ್ತನಿಧಿಯನ್ನು 1. ಪ್ಲೋರ್ ಪ್ರೈಸ್ ಯೋಜನೆ ಹಾಗೂ 2. ಬೆಂಬಲ ಬೆಲೆ ಯೋಜನೆಯ ಅನುಷ್ಠಾನಕ್ಕೆ ಮೀಸಲಿರಿಸಲಾಗಿದೆ. ಆವರ್ತನಿಧಿಯ ಬಳಕೆಯ ಸಂಬಂಧ ಇರುವ ಮಾರುಕಟ್ಟೆ ಕಾಯ್ದೆಯಲ್ಲಿನ ನಿರೂಪಣೆ ಮೇರೆಗೆ ಸರ್ಕಾರವು ಕೈಗೊಳ್ಳುವ ನಿರ್ಣಯದಂತೆ ಆವರ್ತನಿಧಿ ಉಪಯೋಗಿಸಲಾಗುತ್ತಿದೆ.
ಇ	ಇದರಲ್ಲಿ ಅಧಿಕಾರಿಗಳು, ನಿರ್ದೇಶಕರು, ಬ್ಯಾಂಕಿನವರು ಶಾಮೀಲಾಗಿರುವುದು ನಿಜವೇ; ಶಾಮೀಲಾಗಿದ್ದಲ್ಲಿ, ಅವರ ಹೆಸರು ಮತ್ತು ಹುದ್ದೆಗಳೇನು;	ಈಗಾಗಲೇ ಸಲ್ಲಿಕೆಯಾಗಿರುವ ಪ್ರಥಮ ವರ್ತಮಾನ ವರದಿ ಸಂಖ್ಯೆ:10/2020ಕ್ಕೆ ಸಂಬಂಧಿಸಿದಂತೆ ಸಿ.ಸಿ.ಬಿ.ವಿಚಾರಣೆಯನ್ನು ನಡೆಸುತ್ತಿದೆ. ಈ ಹಗರಣದಲ್ಲಿ ಬ್ಯಾಂಕಿನ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು, ಕೃಷಿ ಮಾರಾಟ ಮಂಡಳಿಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಹೊರಗಿನ ವ್ಯಕ್ತಿಗಳು ಭಾಗಿಯಾಗಿರುವುದಾಗಿ ಅನುಮಾನವಿದ್ದು, ತನಿಖೆ ನಡೆಯುತ್ತಿದೆ. ಕೃಷಿ ಮಾರಾಟ ಮಂಡಳಿಯ ಡಾ॥ರತ್ನಮ್ಮ, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಪ್ರಭಾರ), ಡಾ॥ಸಿದ್ಧಗಂಗಯ್ಯ, ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಶ್ರೀ.ಅಮ್ಜದ್ ಉಲ್ಲಾ ಖಾನ್, ಕಿರಿಯ ಸಹಾಯಕರು ಇವರನ್ನು ದಿನಾಂಕ:3-2-2020 ರಿಂದ ಅನ್ವಯಿಸುವಂತೆ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

...3

ಈ	ಬ್ಯಾಂಕಿನಲ್ಲಿ ಠೇವಣಿ ಇಡುವ ವಿಚಾರದಲ್ಲಿ ಅಕ್ರಮವಾಗಿರುವುದು ಕಂಡು ಬಂದಿದ್ದು ಯಾವಾಗ; ಸರ್ಕಾರ ಏನು ಕ್ರಮ ಕೈಗೊಳ್ಳುವುದು?	ಕಂಡಿಕೆ(ಅ)ರಲ್ಲಿ ವಿವರ ನೀಡಿದೆ. • ಮೇಲ್ಕಂಡ ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ. • ಆರ್ಥಿಕ ಇಲಾಖೆಯ ದಿನಾಂಕ: 27.08.2018ರ ಮಾರ್ಗಸೂಚಿಗಳನ್ವಯ ಆಡಳಿತ ಮಂಡಳಿಯ ಅನುಮೋದನೆ ಪಡೆಯದೇ ಬ್ಯಾಂಕ್ ಖಾತೆಗಳನ್ನು ಮತ್ತು ಠೇವಣಿಗಳನ್ನು ವರ್ಗಾಯಿಸುವ ಅಥವಾ ಬದಲಾಯಿಸದಂತೆ ನಿರ್ದೇಶನ ನೀಡಲಾಗಿದೆ. • ದಿನಾಂಕ:21-1-2020ರಂದು ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ಸಂಖ್ಯೆ:10/2020 ದಾಖಲಿಸಲಾಗಿದೆ. ನಂತರದಲ್ಲಿ ಸದರಿ ಪ್ರಕರಣವು ಸಿ.ಸಿ.ಬಿ.ಗೆ ವರ್ಗಾವಣೆಯಾಗಿ ತೀವ್ರ ಪ್ರಗತಿಯಲ್ಲಿದೆ. ಸಿ.ಸಿ.ಬಿ. ಯಿಂದ ವರದಿ ಬಂದ ನಂತರ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಲಾಗುವುದು. • ಸಿಂಡಿಕೇಟ್ ಬ್ಯಾಂಕಿನ ಆಡಳಿತ ಮಂಡಳಿಗೆ ದಿನಾಂಕ:23-1-2020ರಂದು ನಿಶ್ಚಿತ ಠೇವಣಿ ಬಾಬ್ತು ಪೂರ್ಣ ಮರುಪಾವತಿ ಮಾಡಲು ಕೋರಲಾಗಿರುತ್ತದೆ. • ಸಿಂಡಿಕೇಟ್ ಬ್ಯಾಂಕಿನ ಆಡಳಿತ ಮಂಡಳಿಯೊಂದಿಗೆ ನಿರಂತರವಾಗಿ ಪತ್ರ ಮುಖೇನ ಸಂಪರ್ಕ ಸಾಧಿಸಿದ್ದು, ಸಿಂಡಿಕೇಟ್ ಬ್ಯಾಂಕ್ ವತಿಯಿಂದ ದಿನಾಂಕ:2-3-2020ರಂದು, ರೂ.50.00 ಕೋಟಿ ಮೊತ್ತವನ್ನು ಬ್ಯಾಂಕ್‌ನವರು ತನಿಖೆ ಪೂರ್ಣಗೊಳ್ಳುವವರೆಗೆ ಟ್ರಸ್ಟ್ ರೂಪದಲ್ಲಿ ಠೇವಣಿ ಎಂದು ಪರಿಗಣಿಸಿ ಅನುಮೋದಿತ ಬಡ್ಡಿ ನೀಡುವುದನ್ನು ಹಾಗೂ ಉಳಿದ ರೂ.50.00 ಕೋಟಿ ಬಾಬ್ತು ನಿಶ್ಚಿತ ಠೇವಣಿಯಲ್ಲಿರುವುದನ್ನು ಸಿಂಡಿಕೇಟ್ ಬ್ಯಾಂಕಿನ ಮುಖ್ಯ ಕಚೇರಿಯಿಂದ ಧೃಡೀಕರಣ ಪಡೆದುಕೊಳ್ಳಲಾಗಿದೆ.

ಸಇ 127 ಎಂಆರ್‌ಇ 2020

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು